ಸರಕಾರದಿಂದ ಕೊಡಮಾಡುವ ಅನ್ನಭಾಗ್ಯದ ಅಕ್ಕಿ ತಿನ್ನುವ ಬಡವರ ಶಕ್ತಿ ಕುಂದುತ್ತಿದೆ ಎಂಬ ಪುಕಾರು ಎಲ್ಲೆಡೆ ಹಬ್ಬಿತು. ಅದು ಸತ್ಯವಲ್ಲವೆಂಬುದನ್ನು ಸಾಧಿಸಿ ತೋರಿಸುವ ಸಲುವಾಗಿ ಸರಕಾರವು, ಸರಕಾರೇತರ ಸಂಸ್ಥೆಯೊಂದರ ಮೂಲಕ ಸಮೀಕ್ಷೆ ನಡೆಸಲು ತೀರ್ಮಾನಿಸಿತು. ಸರಿ, ಸಮೀಕ್ಷಾ ತಂಡಗಳು ಹತ್ತಾರು ಊರುಗಳಿಗೆ ಭೆಟ್ಟಿ ನೀಡಿ ಮುಕ್ತವಾದ ಸಮೀಕ್ಷೆ ನಡೆಸಿದವು. ಎಲ್ಲ ತಂಡಗಳ ಪರವಾಗಿ ಸಿದ್ಧಪಡಿಸಿದ ಅಂತಿಮ ವರದಿಯಲ್ಲಿ – “ಅನ್ನಭಾಗ್ಯದ ಫಲಾನುಭವಿಗಳ ಶಕ್ತಿ ಎಳ್ಳಷ್ಟೂ ಕುಂದಿಲ್ಲ. ಅಷ್ಟೇ ಅಲ್ಲ, ಅವರ ಆರೋಗ್ಯದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯಾಗಿದೆ.” ಎಂಬ ಶರಾ ಬರೆಯಲಾಗಿತ್ತು. ಈ ಶರಾದ ಕೆಳಗಡೆ ಅತ್ಯಂತ ಸಣ್ಣ ಅಕ್ಷರಗಳಲ್ಲಿ ಒಂದು ಸಣ್ಣ ಫುಟ್‌ನೋಟ್ ಹೀಗಿತ್ತು.



(* ಸರಕಾರ ಕೊಟ್ಟ ಅನ್ನಭಾಗ್ಯದ ಅಕ್ಕಿಯನ್ನು ತಿನ್ನತೊಡಗಿದ ಎಲ್ಲ ಹಳ್ಳಿಗಳ ಜನರ ಶಕ್ತಿ ಮೊದಮೊದಲು ಕುಂದಿದ್ದು ನಿಜ. ಈ ಸತ್ಯ ಗೊತ್ತಾದ ಮೇಲೆ ಅವರು ಆ ಅಕ್ಕಿಯನ್ನು ತಾವು ತಿನ್ನದೇ ನಗರಗಳ ದೊಡ್ಡ ದೊಡ್ಡ ಹೋಟೆಲ್ಲುಗಳಿಗೆ, ಮಾರುಕಟ್ಟೆಯ ಬೆಲೆಗಿಂತಲೂ ಸ್ವಲ್ಪ ಕಡಿಮೆ ದರದಲ್ಲಿ ಮಾರಿ, ಮಾರುಕಟ್ಟೆಯಲ್ಲಿ ಸಿಗುವ ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ತಂದು ತಿನ್ನತೊಡಗಿದರಂತೆ. ಇದಾದ ಮೇಲೆ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದದ್ದಲ್ಲದೆ, ಮೊದಲಿಗಿಂತಲೂ ಹೆಚ್ಚಿನ ಶಕ್ತಿ ಬಂತೆಂಬುದು ಎಲ್ಲ ಬಡವರು ಕೊಟ್ಟ ವಿವರಣೆಯಲ್ಲಿದೆ.

ಈಗ ಈ ಅಕ್ಕಿಯನ್ನು ನಗರಗಳ ದೊಡ್ಡ ದೊಡ್ಡ ಹೋಟೆಲ್ಲುಗಳಲ್ಲಿ ಇಡ್ಲಿ, ದೋಸೆ, ಉತ್ತಪ್ಪ, ಈರುಳ್ಳಿ ದೋಸೆಮೊದಲಾದ ತಿಂಡಿಗಳನ್ನು ಮಾಡಲು ಬಳಸಲಾಗುತ್ತಿದೆ ಎಂದೂ, ಹಾಗೂ ಮೊಸರನ್ನ ಮತ್ತು ಪಲಾವ್ ಮಾಡಲೂ ಇದೇ ಅಕ್ಕಿಯನ್ನು ಉಪಯೋಗಿಲಾಗುತ್ತಿದೆಯೆಂದೂ ನಮ್ಮ ಸಮೀಕ್ಷೆಯಿಂದ ತಿಳಿದು ಬಂದಿದೆ. ಅದಕ್ಕಾಗಿ ಈಗ ತುರ್ತಾಗಿ ನಗರಗಳ ಉನ್ನತ ವರ್ಗಗಳ ಜನರ ಶಕ್ತಿಯ ಪರೀಕ್ಷೆ ಮತ್ತು ಸಮೀಕ್ಷೆ ಎರಡನ್ನೂ ಏಕಕಾಲದಲ್ಲೇ ನಡೆಸುವ ಜರೂರು ಇದೆ ಎಂಬುದು ನಮ್ಮ ಸೂಚನೆ) ಇಲಾಖೆ ಈ ವರದಿಯನ್ನು ಇನ್ನೂ ಬಿಡುಗಡೆ ಮಾಡಿಲ್ಲವಂತೆ.

✤